**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ ಇವರು ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ ಸಂಖ್ಯೆ: 70ಕ್ಕೆ ಉತ್ತರ.**

**ಪ್ರಶ್ನೆ:**

ಕ್ರೀಡಾ ಪ್ರಾಧಿಕಾರದಲ್ಲಿ ಸಂಚಿತ ವೇತನ ಆಧಾರದಲ್ಲಿ 15 ರಿಂದ 30 ವರ್ಷಗಳವರೆಗೆ ಕಾರ್ಯನಿರ್ವಹಿಸುತ್ತಿರುವ ಸುಮಾರು 85 ಕ್ರೀಡಾ ತರಬೇತುದಾರರನ್ನು ಖಾಯಂಗೊಳಿಸುವ / ಕ್ರೀಡಾ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ.

**ಉತ್ತರ:**

ಕರ್ನಾಟಕ ಕ್ರೀಡಾ ಪ್ರಾಧಿಕಾರವನ್ನು ಸರ್ಕಾರದ ಆದೇಶ ಸಂಖ್ಯೆ:ಐಟಿವೈ/302/ಇಪಿಇ/94; ದಿನಾಂಕ:05.05.1995ರಲ್ಲಿ ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತಿನ ಬದಲಾಗಿ ಕರ್ನಾಟಕ ಸಂಘಗಳ ನೋಂದಾವಣೆ ಕಾಯಿದೆ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ರಚಿಸಲಾಗಿದೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರನ್ನು ಖಾಯಂಗೊಳಿಸುವ / ಕ್ರೀಡಾ ಇಲಾಖೆಯಲ್ಲಿ ವಿಲೀನಗೊಳಿಸುವ ಪ್ರಸ್ತಾವನೆಗೆ ಸಂಬಂಧಿಸಿದ ಸಕ್ಷಮ ಇಲಾಖೆಗಳು ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತವೆ: -

ಎ) **ಸಿಆಸು ಇಲಾಖೆ**- ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲವು ದಿನಾಂಕ:10.04.2006ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸಕ್ರಮಾತಿ/ ವಿಲೀನಾತಿಗೆ ಅವಕಾಶವಿಲ್ಲ **(ಅನುಬಂಧ-1).**

ಬಿ) **ಆರ್ಥಿಕ ಇಲಾಖೆ**- ಶ್ರೀಮತಿ ಉಮಾದೇವಿ ಮತ್ತು ಇತರೆ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಂಚಿತ ವೇತನ ಮತ್ತು ದಿನಗೂಲಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸೇವೆಯನ್ನು ಖಾಯಂಗೊಳಿಸಬಾರದೆಂದು ಆದೇಶ ನೀಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಸೂಕ್ತವಲ್ಲ **(ಅನುಬಂಧ-2)**.

ಸಿ) **ಕಾನೂನು ಇಲಾಖೆ**- ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಿಸಿರುವಂತೆ, ಒಬ್ಬ ದಿನಗೂಲಿ ನೌಕರನನ್ನು ಸೇವೆಯಲ್ಲಿ ಮುಂದುವರೆಸದೇ ಇದ್ದ ತಕ್ಷಣ ಆತನ ನೇಮಕಾತಿಯು ರದ್ದಾಗುತ್ತದೆ. ಒಂದು ವೇಳೆ ನೇಮಕಾತಿಯನ್ನು ಸಂವಿಧಾನ ಬದ್ಧವಾಗಿ / ನಿಯಮಾವಳಿಗನುಸಾರವಾಗಿ ಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ ಬಹಳ ಕಾಲದಿಂದ ತಾತ್ಕಾಲಿಕ / ದಿನಗೂಲಿ ನೌಕರರು ಆ ಹುದ್ದೆಗಳಲ್ಲಿ ಮುಂದುವರೆಯುತ್ತಿದ್ದಾರೆ ಎಂದ ಮಾತ್ರಕ್ಕೆ ಆ ಉದ್ಯೋಗಿಗಳಿಗೆ ತಮ್ಮ ಸೇವೆಯನ್ನು ಖಾಯಮಾತಿ ಮಾಡುವಂತೆ ಕೋರುವ ಯಾವುದೇ ಹಕ್ಕು ಲಭ್ಯವಾಗುವುದಿಲ್ಲ ಎಂಬುದನ್ನು ಮಾನ್ಯ ನ್ಯಾಯಾಲಯವು ಸ್ಪಷ್ಟಪಡಿಸಿರುತ್ತದೆ. ಮುಂದುವರೆದು, ಆಡಳಿತ ಇಲಾಖೆಯು ಒಂದು ವೇಳೆ ಈ ಪ್ರಸ್ತಾವನೆಯ ಪ್ರಕಾರ ಕ್ರೀಡಾ ಪ್ರಾಧಿಕಾರದಲ್ಲಿರುವ ಸಂಚಿತ ವೇತನ / ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಖಾಯಂಗೊಳಿಸಿದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇದೇ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಬಹುದಾದ ಎಲ್ಲಾ ನೌಕರರು ತಮ್ಮ ತಮ್ಮ ಸೇವೆಗಳನ್ನು ಖಾಯಂಗೊಳಿಸಿ ಎಂಬ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದಾದ ಸಂದರ್ಭ ಉಂಟಾದಲ್ಲಿ ಈ ಪ್ರಕರಣವು ಒಂದು ಕೆಟ್ಟ ಪೂರ್ವ ನಿದರ್ಶನ (Bad Precedent) ಆಗಬಹುದಾದ

ಸಂಭವವಿರುತ್ತದೆ. ಆದುದರಿಂದ, ಆರ್ಥಿಕ ಇಲಾಖೆಯು ಈಗಾಗಲೇ ಅಭಿಪ್ರಾಯಿಸಿದ ಪ್ರಕಾರ ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನೇ ಕಾನೂನು ಇಲಾಖೆಯು ಕೂಡ ವ್ಯಕ್ತಪಡಿಸಿದೆ **(ಅನುಬಂಧ-3).**

ಆದಾಗ್ಯೂ, ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದ ನಿರಂತರವಾಗಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ವಿಲೀನಗೊಳಿಸಲು, ಯುವ ಸಬಲೀಕರಣ ಮತ್ತು ಕ್ರೀಡಾ ಸೇವೆಗಳು (ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರ ವಿಲೀನಾತಿ) (ವಿಶೇಷ) ನಿಯಮಗಳು, 2022ನ್ನು ರಚಿಸುವ ಸಂಬಂಧ ಸಚಿವ ಸಂಪುಟದ ಮುಂದೆ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಆರ್ಥಿಕ ಇಲಾಖೆ, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆ, ಕಾನೂನು ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳು ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶದನ್ವಯ ಒಪ್ಪಿರುವುದಿಲ್ಲ. ಆ ಸಂದರ್ಭದಲ್ಲಿ ಪೂರಕವಾಗಿ ಸಿಆಸು ಇಲಾಖೆಯು ಕೆಳಕಂಡಂತೆ ಸ್ಪಷ್ಟಪಡಿಸಿರುತ್ತದೆ:-

*ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸಾರ್ವಜನಿಕ ಸೇವೆಗೆ ವಿಲೀನಗೊಳಿಸುವುದಕ್ಕೆ ನಿಷೇಧ) ಅಧಿನಿಯಮ, 2020ರಲ್ಲಿ ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಅಥವಾ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ವಿಲೀನಗೊಳಿಸುವುದನ್ನು ನಿಷೇಧಿಸಲು ಉಪಬಂಧವನ್ನು ಕಲ್ಪಿಸಲಾಗಿದೆ. ಸದರಿ ಅಧಿನಿಯಮದ ಪ್ರಕರಣ 2ರ ಉಪ ಪ್ರಕರಣ (ಎ) ರಲ್ಲಿ ಸಾರ್ವಜನಿಕ ವಲಯದ ಸಂಸ್ಥೆಯ ಪರಿಭಾಷೆಯನ್ನು ನೀಡಲಾಗಿದೆ. ಸದರಿ ಪರಿಭಾಷೆಯನ್ವಯ ಸಹ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಸುಮಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತರಬೇತುದಾರರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಒಂದು ಬಾರಿಗೆ ವಿಲೀನಗೊಳಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ.*

ಅಂತಿಮವಾಗಿ, ಈ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ವಿಲೀನಾತಿಗೆ ಅವಕಾಶವಿಲ್ಲವೆಂದು ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತಾರೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ತರಬೇತುದಾರರಿಂದ ತರಬೇತಿಯಲ್ಲಿನ ಸಾಧನೆ ಕುರಿತು ಮಾಹಿತಿಯನ್ನು ಪಡೆದು, ಸದರಿ ತರಬೇತುದಾರರನ್ನು ಸಕ್ರಮಗೊಳಿಸುವ ಪ್ರಸ್ತಾವನೆಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಮರು ಮಂಡಿಸಲು ಪರಿಶೀಲಿಸಲಾಗುತ್ತಿದೆ.

**ಸಂಖ್ಯೆ:ವೈಎಸ್‌ಡಿ/ಸಿಡಿಎನ್/29/2024**

**(ಬಿ. ನಾಗೇಂದ್ರ)**
ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಅನುಬಂಧ-1

**ಟಿಪ್ಪಣಿ ಹಾಳೆ**

53

**ಸಂಖ್ಯೆ:ಸಿಆಸುಇ 31 ಡಿಸೇನಿ 2018** **ಸಿ.ಆ.ಸು.ಇ (ಸೇವಾ ನಿಯಮಗಳು–ಡಿ)**
**ಯುಸೇಇ 73 ಯುಇಸೇ 2017 (ಭಾ–1)** **ದಿನಾಂಕ:12–03–2018.**

ಸರ್ಕಾರದ ಸುತ್ತೋಲೆ **ಸಂಖ್ಯೆ:ಸಿಆಸುಇ 09 ಸೇನಿಇ 1991, ದಿನಾಂಕ :08.03.1991**ರನ್ವಯ ಸ್ವಾಯತ್ತ ಸಂಸ್ಥೆ/ಮಂಡಳಿ/ನಿಗಮಗಳು ಇತ್ಯಾದಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಿ.ಆ.ಸು.ಇ(ಸೇ.ನಿ) ವಿಭಾಗವು ಹೊರಡಿಸಿದ ನಿಯಮಗಳು/ಆದೇಶಗಳು ನೇರವಾಗಿ ಅನ್ವಯವಾಗದ ಪ್ರಕರಣಗಳಲ್ಲಿ ಸಿ.ಆ.ಸು.ಇ(ಸೇ.ನಿ)ಯ ಅಭಿಪ್ರಾಯವನ್ನು ಕೋರುವ ಅವಶ್ಯಕತೆಯಿರುವುದಿಲ್ಲ. ಆದಾಗ್ಯೂ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ ಅಥವಾ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಸಂಬಂಧ, ದಿನಾಂಕ:10.04.2006ರಂದು ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತೆ ಇದೆ.–

ಪ್ಯಾರಾ 34ರಲ್ಲಿ ಹೀಗೆ ಹೇಳಲಾಗಿದೆ:–

*".....it is clear that adherence to the rule of equality in public employment is a basic feature of our Constitution and since the rule of law is the core of our Constitution, a Court would certainly be disabled from passing an order upholding a violation of Article 14 or in ordering the overlooking of the need to comply with the requirements of Article 14 read with Article 16 of the Constitution. Therefore, consistent with the scheme for public employment, this Court while laying down the law, has necessarily to hold that unless the appointment is in terms of the relevant rules and after a proper competition among qualified persons, the same would not confer any right on the appointee. If it is a contractual appointment, the appointment comes to an end at the end of the contract, if it were an engagement or appointment on daily wages or casual basis, the same would come to an end when it is discontinued. Similarly, a temporary employee could not claim to be made permanent on the expiry of his term of appointment. It has also to be clarified that merely because a temporary employee or a casual wage worker is continued for a time beyond the term of his appointment, he would not be entitled to be absorbed in regular service or made permanent, merely on the strength of such continuance, if the original appointment was not made by following a due process of selection as envisaged by the relevant rules."*

**ಟಿಪ್ಪಣಿ ಹಾಳೆ**

ತೀರ್ಪಿನ ಪ್ಯಾರಾ 10ರಲ್ಲಿ ಹೀಗೆ ಹೇಳಲಾಗಿದೆ:-

***"The States have made Acts, Rules or Regulations for implementing the above constitutional guarantees and any recruitment to the service in the State or in the Union is governed by such Acts, Rules and Regulations. The Constitution does not envisage any employment outside this constitutional scheme and without following the requirements set down therein."***

ತೀರ್ಪಿನ ಪ್ಯಾರಾ 44ರಲ್ಲಿ ಹೀಗೆ ಹೇಳಲಾಗಿದೆ:-

***".....there should be no further by-passing of the Constitutional requirement and regularizing or making permanent, those not duly appointed as per the Constitutional scheme."***

ತೀರ್ಪಿನ ಪ್ಯಾರಾ 45ರಲ್ಲಿ ಹೀಗೆ ಹೇಳಲಾಗಿದೆ:-

***"It is also clarified that those decisions which run counter to the principle settled in this decision, or in which directions running counter to what we have held herein, will stand denuded of their status as precedents."***

ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಈ ಮೇಲ್ಕಂಡ ತೀರ್ಪಿನ ಹಿನ್ನಲೆಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸಕ್ರಮಾತಿ/ವಿಲೀನಾತಿಗೆ ಅವಕಾಶವಿಲ್ಲವೆಂದು ಆಡಳಿತ ಇಲಾಖೆಗೆ ತಿಳಿಸಲಾಗಿದೆ.

**(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು.ಇ ರವರಿಂದ ಅನುಮೋದಿತ)**

12/03/18

(ಎ.ವಿ ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇ.(ಸೇವಾ ನಿಯಮಗಳು-2).

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಡಾ: [illegible]
ಸರ್ಕಾರದ [illegible] ಕಾರ್ಯದರ್ಶಿ
ಯುವ ಸಬಲೀಕರಣ [illegible] ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ

16/3/18

ಅನುಬಂಧ-2

FD 133 EXP 7/2020
YSD 02 EYW 2019

Finance Department
Date:07.05.2020

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಉಮಾದೇವಿ ಮತ್ತು ಇತರೆ ಪ್ರಕರಣಗಳಲ್ಲಿ ಮಾನ್ಯ ಸುಪ್ರೀಂ ಕೋರ್ಟ್ ಸಂಚಿತ ವೇತನ ಮತ್ತು ದಿನಗೂಲಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸೇವೆಯನ್ನು ಖಾಯಂಗೊಳಿಸಬಾರದೆಂದು ಆದೇಶ ನೀಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಸೂಕ್ತವಿಲ್ಲವೆಂದು ಆಡಳಿತ ಇಲಾಖೆಗೆ ತಿಳಿಸಿದೆ.

ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ)
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ).

(ಎಂ.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವೆಚ್ಚ 5&7).

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಅನುಬಂಧ-3

ವಿಷಯ: ಆಡಳಿತ ಇಲಾಖೆಯು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದ್ದಿಯವರನ್ನು ಖಾಯಂಗೊಳಿಸುವ ಬಗ್ಗೆ.

**YSD-EYW/2/2019** **LAW-OPN/50/2020**

**ದಿನಾಂಕ: 05.08.2020**

ಆಡಳಿತ ಇಲಾಖೆಯು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದ್ದಿಯವರನ್ನು ಖಾಯಂಗೊಳಿಸುವ ವಿಚಾರದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಿರುತ್ತದೆ.

ಮುಂದುವರೆದು, ಆಡಳಿತ ಇಲಾಖೆಯು ಇದೇ ಕಡತದ ವಿಷಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಿದ್ದು, ಆರ್ಥಿಕ ಇಲಾಖೆಯು ಉಮಾ ದೇವಿ ಮತ್ತು ಇತರೆ ಪ್ರಕರಣಗಳಲ್ಲಿ ಮಾನ್ಯ ಸುಪ್ರೀಂ ಕೋರ್ಟ್ ಸಂಚಿತ ವೇತನ ಮತ್ತು ದಿನಗೂಲಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಸೇವೆಯನ್ನು ಖಾಯಂಗೊಳಿಸಬಾರದೆಂದು ಆದೇಶ ನೀಡಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಸೂಕ್ತವಲ್ಲವೆಂಧು ನೀಡಿರುವ ಅಭಿಪ್ರಾಯವನ್ನು ಈ ಕಡತದಲ್ಲಿ ಕಾಣಬಹುದಾಗಿದೆ.

ಮುಂದುವರೆದು, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಗೆ ದಿನಾಂಕ: 18.12.2019 ರಂದು ಬರೆದ ಪತ್ರವನ್ನು ಕಡತದಲ್ಲಿ ಕಾಣಬಹುದಾಗಿದ್ದು, ಸದರಿ ಪತ್ರದಲ್ಲಿ ಉಲ್ಲೇಖಿಸಿದ ಅಂಶಗಳಿಂದ **ಸರ್ಕಾರಿ ಆದೇಶ ಸಂಖ್ಯೆ: ವಾಪ್ರಯು 124 ಯುಸೇಕ್ರೀ 93 ದಿನಾಂಕ: 15.05.1995 ರಲ್ಲಿ ಕ್ರೀಡಾ ಪರಿಷತ್ತಿನಲ್ಲಿ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ 175 ಹುದ್ದೆಗಳನ್ನು ಈ ಕೆಳಕಂಡಂತೆ ನೇಮಕಾತಿ ಮಾಡಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ. ಆದರೆ ಸದರಿ ಹುದ್ದೆಗಳಲ್ಲಿ ನೇಮಕಗೊಂಡ ತರಬೇತುದಾರರ ಸೇವೆಯನ್ನು ಒಂದು ವರ್ಷದ ಅವಧಿಯ ನಂತರ ರದ್ದುಗೊಳಿಸದೇ** ಮುಂದುವರಿಸಿಕೊಂಡು ಬರಲಾಗಿದೆ ಎಂಬ ಉಲ್ಲೇಖವನ್ನು ಕಾಣಬಹುದಾಗಿದೆ.

ಮುಂದುವರೆದು, ಈಗಾಗಲೇ ಆರ್ಥಿಕ ಇಲಾಖೆಯು ಉಮಾ ದೇವಿ ಮತ್ತಿತರ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗುತ್ತಿಗೆ ನೌಕರರ ಖಾಯಂಮಾತಿ ಮಾಡಕೂಡದೆಂದು ಆದೇಶ ಮಾಡಿರುವ ಹಿನ್ನೆಲೆಯಲ್ಲಿ ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಗಣಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಿಸಿರುವುದನ್ನು ಕಾನೂನು ಇಲಾಖೆಯು ಕೂಡ ಸಹಮತಿಸುತ್ತದೆ. ಮುಂದುವರೆದು, ಕಾನೂನು ಇಲಾಖೆಯು ಅಭಿಪ್ರಾಯಿಸುವುದೇನೆಂದರೆ, Umadevi ಪ್ರಕರಣದ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು **ಸೂಕ್ತ ನಿಯಮಾವಳಿಗಳ ಅನುಸಾರವಾಗಿ ನೇಮಕಾತಿ ಮಾಡಿಕೊಳ್ಳದಿದ್ದ ಪಕ್ಷದಲ್ಲಿ ಒಬ್ಬ ಉದ್ಯೋಗಿಯನ್ನು ಕರಾರಿನ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿದ್ದಲ್ಲಿ ಆತನ ನೇಮಕಾತಿಯು ಕರಾರಿನ ಅವಧಿ ಮುಗಿದ ಕೂಡಲೇ ರದ್ದಾಗುತ್ತದೆ ಹಾಗೂ ಒಬ್ಬ ಉದ್ಯೋಗಿಯನ್ನು ದಿನಗೂಲಿಯಾಗಿ ನೇಮಕ ಮಾಡಿಕೊಂಡಿದ್ದಲ್ಲಿ**

ಆತನನ್ನು ಸೇವೆಯಲ್ಲಿ ಮುಂದುವರಿಸುವುದನ್ನು ಕೈಬಿಟ್ಟಕೂಡಲೇ ಆತನ ನೇಮಕಾತಿಯು ರದ್ದಾಗುತ್ತದೆ ಎಂಬುದಾಗಿ ಈ ಕೆಳಗಿನಂತೆ ಅಭಿಪ್ರಾಯಿಸಿರುವುದನ್ನು ಕಾಣಬಹುದಾಗಿದೆ.

**Secretary, State Of Karnataka And ... vs Umadevi And Others on 10 April, 2006**

*Thus, it is clear that adherence to the rule of equality in public employment is a basic feature of our Constitution and since the rule of law is the core of our Constitution, a Court would certainly be disabled from passing an order upholding a violation of Article 14 or in ordering the overlooking of the need to comply with the requirements of Article 14 read with Article 16 of the Constitution. Therefore, consistent with the scheme for public employment, this Court while laying down the law, has necessarily to hold that unless the appointment is in terms of the relevant rules and after a proper competition among qualified persons, the same would not confer any right on the appointee. If it is a contractual appointment, the appointment comes to an end at the end of the contract, if it were an engagement or appointment on daily wages or casual basis, the same would come to an end when it is discontinued. Similarly, a temporary employee could not claim to be made permanent on the expiry of his term of appointment. It has also to be clarified that merely because a temporary employee or a casual wage worker is continued for a time beyond the term of his appointment, he would not be entitled to be absorbed in regular service or made permanent, merely on the strength of such continuance, if the original appointment was not made by following a due process of selection as envisaged by the relevant rules. It is not open to the court to prevent regular recruitment at the instance of temporary employees whose period of employment has come to an end or of ad hoc employees who by the very nature of their appointment, do not acquire any right*

ಮೇಲ್ಕಂಡ ತೀರ್ಪಿನ ಅನ್ವಯ ಒಬ್ಬ ದಿನಗೂಲಿ ನೌಕರನನ್ನು ಸೇವೆಯಲ್ಲಿ ಮುಂದುವರಿಸದೇ ಇದ್ದ ತಕ್ಷಣ ಆತನ ನೇಮಕಾತಿಯು ರದ್ದಾಗುತ್ತದೆ. ಒಂದು ವೇಳೆ ನೇಮಕಾತಿಯನ್ನು ಸಂವಿಧಾನ ಬದ್ಧವಾಗಿ/ ನಿಯಮಾವಳಿಗನುಸಾರವಾಗಿ ಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ ಬಹಳ ಕಾಲದಿಂದ ತಾತ್ಕಾಲಿಕ/ದಿನಗೂಲಿ ನೌಕರರು ಆ ಹುದ್ದೆಗಳಲ್ಲಿ ಮುಂದುವರೆಯುತ್ತಿದ್ದಾರೆ ಎಂದ ಮಾತ್ರಕ್ಕೆ ಆ ಉದ್ಯೋಗಿಗಳಿಗೆ ತಮ್ಮ ಸೇವೆಯನ್ನು ಖಾಯಂಮಾತಿ ಮಾಡುವಂತೆ ಕೋರುವ ಯಾವುದೇ ಹಕ್ಕು ಲಭ್ಯವಾಗುವುದಿಲ್ಲ ಎಂಬುದನ್ನು ಮಾನ್ಯ ನ್ಯಾಯಾಲಯವು ಸ್ಪಷ್ಟಪಡಿಸಿರುತ್ತದೆ. ಮುಂದುವರೆದು, ಆಡಳಿತ ಇಲಾಖೆಯು ಒಂದು ವೇಳೆ ಈ ಪ್ರಸ್ತಾವನೆಯ ಪ್ರಕಾರ ಕ್ರೀಡಾ ಪ್ರಾಧಿಕಾರದಲ್ಲಿರುವ ಸಂಚಿತ ವೇತನ/ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎನ್ನಲಾದ ನೌಕರರನ್ನು ಖಾಯಂಗೊಳಿಸಿದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇದೇ

ವಿಷಯ: ಆಡಳಿತ ಇಲಾಖೆಯು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದ್ದಿಯನರನ್ನು ಖಾಯಂಗೊಳಿಸುವ ಬಗ್ಗೆ.



ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಬಹುದಾದ ಎಲ್ಲಾ ನೌಕರರೂ ತಮ್ಮ ತಮ್ಮ ಸೇವೆಗಳನ್ನು ಖಾಯಂಗೊಳಿಸಿ ಎಂಬ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದಾದ ಸಂದರ್ಭ ಉಂಟಾದಲ್ಲಿ ಈ ಪ್ರಕರಣವು ಒಂದು ಕೆಟ್ಟ ಪೂರ್ವ ನಿದರ್ಶನ (Bad Precedent) ಆಗಬಹುದಾದ ಸಂಭವವಿರುತ್ತದೆ. ಆದ್ದರಿಂದ, ಆರ್ಥಿಕ ಇಲಾಖೆಯು ಈಗಾಗಲೇ ಅಭಿಪ್ರಾಯಿಸಿದ ಪ್ರಕಾರ ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನೇ ಕಾನೂನು ಇಲಾಖೆಯು ಕೂಡ ವ್ಯಕ್ತಪಡಿಸಿದೆ.

(ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿತ)

ಮಧುಸೂಧನ ಡಿ. ಕೆ
ಸರ್ಕಾರದ ಉಪ ಕಾರ್ಯದರ್ಶಿ(ಅಭಿಪ್ರಾಯ-1)
ಕಾನೂನು ಇಲಾಖೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

7.8.2020

10/8/2020